**<u>ಸಾಕ್ಷಿಯನ್ನು ದಿಃ 02.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ-</u>**

ನಿಡಿ. 40 ರಿಂದ 51 ರ ದಾಖಲೆಗಳು ಈ ದಾವೆಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಮೊದಲನೆ ಲೇ ಔಟ್ ಅಪ್ರೂವಲ್ ಗೆ 1999 ರಲ್ಲಿ, 2 ನೇ ಬಾರಿ 2011 ನೇ ಸಾಲಿನಲ್ಲಿ ಲೇ ಔಟ್ ಅಪ್ರೂವಲ್ ಅರ್ಜಿ ಸಲ್ಲಿಸಿರಬಹುದು. ಲಲಿತಾ ಬಡಾವಣೆ ಎಂಬ ಹೆಸರನ್ನು ಅಭಿವೃದ್ದಿ ಪಡಿಸುವ ಮೊದಲೆ ಕೊಡಲಾಗಿತ್ತು. ಆ ಬಗ್ಗೆ ದಾಖಲೆಯನ್ನು ಇದೆಯಾ ಎಂದರೆ ಟೌನ್ ಪ್ಲ್ಯಾನಿಂಗ್ ಅಪ್ಲಿಕೇಶನ್ ನಲ್ಲೆ ನಮೂದಿಸಲಾಗಿದೆ ಎನ್ನುತ್ತಾರೆ. ಬಡಾವಣೆ ನಿರ್ಮಾಣ ಮಾಡಲು ಅನುಮೋದನೆ ಆಗಿದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದಿರಾ ಎಂದರೆ ಟೌನ್ ಪ್ಲ್ಯಾನಿಂಗ್ ದಾಖಲೆ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಅನುಮೋದಿತ ನಕ್ಷೆ ಪಡೆದ ಬಗ್ಗೆ ದಾಖಲೆ ಹಾಜರು ಪಡಿಸಿದ್ದಿರಾ ಎಂದರೆ ಟೌನ್ ಪ್ಲ್ಯಾನಿಂಗ್ ದಾಖಲೆಯಲ್ಲೆ ಸೀಲು ಮತ್ತು ಸಹಿ ಮಾಡಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಟೌನ್ ಪ್ಲ್ಯಾನಿಂಗ್ ಅಪ್ರೂವಲ್ ಆದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅನುಮೋದಿತ ನಕ್ಷೆ ಬಡಾವಣೆ ಅಭಿವೃದ್ದಿ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

ಸಂಬಂಧಪಟ್ಟ ಇಲಾಖೆಯಿಂದ ನಿವೇಶನಗಳ ಬಿಡುಗಡೆ ಪತ್ರವನ್ನು ಹಾಜರು ಪಡಿಸಿದ್ದಿರಾ ಎಂದರೆ ನಮೂನೆ 9 ಮತ್ತು 11 ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಲೇ-ಔಟ್ ಮಾಡಿದ ಮೇಲೆ ಸೈಟ್ ಗಳನ್ನು ಮಾರಾಟ ಮಾಡುವ ಸಂಬಂಧ ಜಾಹಿರಾತು ಹೊರಡಿಸಿಲ್ಲ. ಅಲ್ಲಿ ಯಾವುದೆ ಲೇ ಔಟ್ ಆಗಿರಲಿಲ್ಲ ಮತ್ತು ಸೈಟ್ ಗಳು ಆಗಿರಲಿಲ್ಲ ಅದ ಕಾರಣ ಯಾವುದೆ ಜಾಹಿರಾತು ಹೊರಡಿಸಿಲ್ಲ ಎಂದರೆ ಸರಿಯಲ್ಲ. ನೀರು ಸರಬರಾಜು ಬಗ್ಗೆ ಜನ ಮಂಡಳಿಗೆ ಅರ್ಜಿ ಸಲ್ಲಿಸಿದ್ದಿರಾ ಎಂದರೆ ಖಾಸಗಿಯಾಗಿ ಪಡೆದುಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ಒಳ ಚರಂಡಿ ವಿಷಯವಾಗಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಅದೆಲ್ಲಾ ಅದ ನಂತರವೇ ಲೇ ಔಟ್

ಅಪ್ರೂ ಆಗಿರುವುದು ಎನ್ನುತ್ತಾರೆ. ದಾವಾ ಷಡ್ಯೂಲ್ ಸ್ವತ್ತಿನಲ್ಲಿ ಸೈಟ್ ಮಾಡಿ ರಸ್ತೆ ಮಾಡಿದ್ದೆವು ಎಂದು ಹೇಳಿದ್ದು, ಹಾಗೆ ರಸ್ತೆ ಮಾಡಲು ಕಾಂಟ್ರ್ಯಾಕ್ಟರ್ ಗಳನ್ನು ನೇಮಿಸಿದ ಬಗ್ಗೆ ಕಾಂಟ್ರ್ಯಾಕ್ಟರ್ ಮತ್ತು ಸಬ್ ಕಾಂಟ್ರ್ಯಾಕ್ಟರ್ ಅನ್ನು ನೇಮಿಸಿಕೊಂಡಿದ್ದೆ. ಆ ಬಗ್ಗೆ ಯಾವುದೆ ಅಗ್ರಿಮೆಂಟ್ ಮಾಡಿಲ್ಲ. ನಮೂನೆ 9 ಮತ್ತು 11 ದಾವಾ ಸ್ವತ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಡಿ. 27 ರಲ್ಲಿ ಕಂಡು ಬರುವ ಪ್ರಕಾಶ್ ಎಂಬುವವರು 1997 ರಲ್ಲಿ ಮನುಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ನನಗೆ ತುಂಬಾ ಆಪ್ತರು ಎಂದರೆ ಸೇಲ್ ಡೀಡ್ ಆದ ನಂತರ ಆಪ್ತರಾಗಿದ್ದರು ಎನ್ನುತ್ತಾರೆ. ನಾನು ಮತ್ತು ಪ್ರಕಾಶ್ ರವರು ಷಾಮಿಲಾಗಿ ಕ್ರಯ ಪತ್ರಗಳನ್ನು, ನಿಡಿ. 10 ರಿಂದ 31 ರ ಕಂದಾಯ ರಶೀದಿಗನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಾವಾ ಷಡ್ಯೂಲ್ ಸ್ವತ್ತಿಗೆ ಸಂಬಂಧಿಸಿ ಕನ್ವರ್ಶನ್ ಆಗಿದೆ ಎಂಬ ಅದೇಶವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2011-12 ನೇ ಸಾಲಿನಲ್ಲಿ ಲೇ-ಔಟ್ ಅಪ್ರೂವಲ್ ಗೆ ಯಾವುದೆಲ್ಲಾ ದಾಖಲೆಗಳನ್ನು ಕೇಳಿದ್ದರೂ ಆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. 2011-12 ನೇ ನಲ್ಲಿಯೂ ಸಹ ದಾವಾ ಸ್ವತ್ತು ವಾದಿಗಳು ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. 1997 ರಿಂದ 2018-19 ರ ವರೆಗೂ ಆರ್.ಟಿ.ಸಿಗಳು ವಾದಿಗಳ ಹೆಸರಿನಲ್ಲಿ ಇದ್ದ ಬಗ್ಗೆ ತಹಸೀಲ್ದಾರರ ಕಛೇರಿಯಲ್ಲಿ ಪ್ರಶ್ನೆ ಮಾಡಿದ್ದಿರಾ ಎಂದರೆ 2018-19 ರ ವರೆಗೆ ಆ ಬಗ್ಗೆ ಗೊತ್ತಾಗಿರಲಿಲ್ಲ ಎನ್ನುತ್ತಾರೆ. ನಂತರ ಎ.ಸಿ ರವರಿಗೆ ಬದಲಾವಣೆ ಮಾಡಿಕೊಟ್ಟಿದ್ದರು ಎನ್ನುತ್ತಾರೆ.

ಸಿಸಿ 1236/2021 ಈ ಕೇಸ್ ನ ವಾದಿ ಮತ್ತು ಪ್ರತಿವಾದಿ ನಡುವೆ ಇರುವ ಕ್ರಿಮಿನಲ್ ಕೇಸ್ ಎಂದರೆ ಅದರ ನಂಬರ್ ನನಗೆ ನೆನಪಿಲ್ಲ. ಸದರಿ ಕೇಸ ನಲ್ಲಿ ನಾನು ವಾದಿಗಳ ವಿರುದ್ಧ ದೂರು ಕೊಟ್ಟಿದ್ದೆ ಎಂದರೆ ಸರಿ. ಈ ದಾವೆಯ 5 ನೇ ಪ್ರತಿವಾದಿ ಸಿಸಿ 1236/2021 ರ ಕೇಸ್ ನಲ್ಲಿ 4 ನೇ ಆರೋಪಿ

ಎಂದರೆ ಆರೋಪಿ ಇದ್ದಾರೆ ಎಷ್ಟನೆ ಆರೋಪಿ ಎಂದು ಗೊತ್ತಿಲ್ಲ. ದಿನೇಶ್ ಮತ್ತು ನಾರಾಯಣ ರವರು 5 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಸಿಸಿ ಪ್ರಕರಣದ 7 ನೇ ಆರೋಪಿ ಈ ದಾವೆಯ 2 ನೇ ವಾದಿ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಾಗೂ 30 ಎಕರೆಗೆ ಪ್ಲಾಟ್ ಖರೀದಿಸಿದ ಸ್ವತ್ತಿನ ಮಾಲೀಕರು ನಮಗೂ ಸುಮಾರು ಸಿವಿಲ್ ಕ್ರಿಮಿನಲ್ ಕೇಸ್ ಇರುತ್ತವೆ ಎಂದರೆ ಒಂದೂ ಎರಡೂ ಇರುತ್ತವೆ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಯಾವುದೆ ಲೇ ಔಟ್ ಆಗಿಲ್ಲ, ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.ನಿಡಿ. 53 ರ ಸೇಲ್ ಡೀಡ್ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟರ್ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಷಡ್ಯೂಲ್ ಸ್ವತ್ತು ಈಗಲೂ ಕೂಡ ವ್ಯವಸಾಯದ ಜಮೀನು ಆಗಿದೆ ಎಂದರೆ ಸರಿಯಲ್ಲ. ದಾವಾ ಜಮೀನು ಈಗಲೂ ಕೂಡ ವಾದಿಗಳೆ ಮಾಲೀಕರು ಮತ್ತು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಚನ್ನಮ್ಮ ಆಗಲಿ ಕಾಳಯ್ಯ ಆಗಲಿ ಯಾವುದೆ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಷ್ಟನಾದ ಕಾರಣ ವಾದಿಗಳಿಗೆ ವಿನಾಃ ಕಾರಣ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.